KARN010003712026

| | | |
|---|---|---|
| Presented on | : | 19-02-2026 |
| Registered on | : | 19-02-2026 |
| Decided on | : | 26-03-2026 |
| Duration | : | 1 month 5 days |

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.

**:ಉಪಸ್ಥಿತರು:**

M H ANNAYYANAVAR Digitally signed by M H ANNAYYANAVAR Date: 2026.03.26 17:56:17 +0530

ಶ್ರೀಯುತ ಎಂ.ಹೆಚ್. ಅಣ್ಣಯ್ಯನವರ, ಬಿಕಾಂ.ಎಲ್.ಎಲ್.ಬಿ. (ವಿಶೇಷ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

ದಿನಾಂಕ **26** ನೇ ಮಾರ್ಚ್ ಮಾಹೆ **2026**

ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ **122/2026**

ಅರ್ಜಿದಾರರು (ಆರೋಪಿತರು) : 1. ಶ್ರೀ ವೆಂಕಟೇಶ.ವಿ.,
ಬಿನ್ ವೆಂಕಟನಾರಾಯಣಪ್ಪ,
ವಯಸ್ಸು 67 ವರ್ಷ.

2. ಶ್ರೀ ಶಿವಣ್ಣ,
ಬಿನ್ ಕರಿಯಪ್ಪ,
ವಯಸ್ಸು 48 ವರ್ಷ.
ವಾಸಃ ಶೇಷಗಿರಹಳ್ಳಿ ಗ್ರಾಮ, ಬಿಡದಿ ಹೋಬಳಿ,
ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ.
(ಪರವಾಗಿ ಶ್ರೀ.ಎ.ಎಂ.ಜಿ., ವಕೀಲರು)

- ವಿರುದ್ಧ -

ಎದುರುದಾರರು: ಸರ್ಕಾರದ ಪರವಾಗಿ ಐಜೂರು ಪೊಲೀಸ್ ಠಾಣೆ,
ರಾಮನಗರ.
(ಪರವಾಗಿ ಸರ್ಕಾರಿ ಅಭಿಯೋಜಕರು)

*****

## ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ **482** ರಡಿ ಜಾಮೀನು ಅರ್ಜಿಯ ಮೇಲೆ ಆದೇಶ

ಅರ್ಜಿದಾರರ ಪರ ವಕೀಲರು ಮಾನ್ಯ ನ್ಯಾಯಾಲಯದಲ್ಲಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರ ಅಡಿಯಲ್ಲಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಸಲ್ಲಿಸಿ, ಐಜೂರು ಪೊಲೀಸ್ ಠಾಣಾಧಿಕಾರಿಯವರು ಅರ್ಜಿದಾರ ಯಾವುದೇ ರೀತಿಯ ಅಪರಾಧ ಮಾಡಿಲ್ಲದಿದ್ದರೂ ಸಹಿತ ಅರ್ಜಿದಾರರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದು, ಅರ್ಜಿದಾರು ನ್ಯಾಯಾಲಯಕ್ಕೆ ಸೂಕ್ತ ಜಾಮೀನು ನೀಡಲು ತಯಾರಿದ್ದು ಹಾಗೂ ನ್ಯಾಯಾಲಯ ವಿಧಿಸುವ ಷರತ್ತುಗಳನ್ನು ಪಾಲಿಸಲು ತಯಾರಿರುತ್ತಾರೆಂದು, ಆದ್ದರಿಂದ ಅರ್ಜಿದಾರ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಮಂಜೂರು ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

2. ಸದರಿ ಅರ್ಜಿಗೆ ಸರಕಾರಿ ಅಭಿಯೋಜಕರು ತಕರಾರು ಸಲ್ಲಿಸಿ, ಅರ್ಜಿದಾರರ ಮೇಲೆ ಇರತಕ್ಕಂತಹ ಆಪಾದನೆ ಜಾಮೀನು ರಹಿತವಾದಂತಹ ಆಪಾದನೆಯಾಗಿರುತ್ತದೆ. ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದಲ್ಲಿ ಪುನಃ ಇಂತಹದೇ ಕೃತ್ಯ ಎಸಗುವ ಸಾಧ್ಯತೆ ಇರುತ್ತದೆ ಹಾಗೂ ತನಿಖೆಗೆ ಸಹಕರಿಸದೇ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ, ಸಾಕ್ಷಿದಾರರಿಗೆ ಬೆದರಿಸುವ ತನಿಖೆಗೆ ಅಡ್ಡಿಯುಂಟು ಮಾಡುವ ಸಾಧ್ಯತೆ ಇರುತ್ತದೆ ಎಂದು, ಈ ಮೇಲ್ಕಂಡ ಕಾರಣಗಳಿಂದಾಗಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೇಳಿಕೊಂಡಿದ್ದಾರೆ.

3. ಅರ್ಜಿ, ತಕರಾರು ಹಾಗೂ ಉಭಯ ವಕೀಲರ ವಾದ ವಿವಾದವನ್ನು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆ:-

1. ಅರ್ಜಿದಾರರ ಪರ ವಕೀಲರು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರಡಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಬಹುದೇ ?
2. ಯಾವ ಆದೇಶ ?

4. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಅಂಶ ನಂ.1 | : | ಸಕಾರಾತ್ಮಕವಾಗಿ |
| ಅಂಶ ನಂ.2 | : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ: |

## <u>ಕಾರಣಗಳು</u>

5. <u>ಅಂಶ ಸಂಖ್ಯೆ **1:**</u> ಪಿರ್ಯಾದುದಾರರು ಕೊಟ್ಟ ದೂರಿನಂತೆ ಐಜೂರು ಪೊಲೀಸ್ ಠಾಣಾಧಿಕಾರಿಗಳು ಅರ್ಜಿದಾರರ ವಿರುದ್ಧ ಐಜೂರು ಪೊಲೀಸ್ ಠಾಣಾ ಅಪರಾಧ ಸಂಖ್ಯೆ 10/2026, ಭಾರತೀಯ ನ್ಯಾಯ ಸಂಹಿತೆ 2023 ಕಲಂ.418, 420, 465, 466, 474, 471 ಸಹಕಲಂ.34 ಮತ್ತು ರಿಜಿಸ್ಟ್ರೇಷನ್ ಆ್ಯಕ್ಟ್ ಕಲಂ.82 ಮತ್ತು 83 ರ ಅಡಿಯಲ್ಲಿ ಪ್ರಕರಣ ದಾಖಲು ಮಾಡಿರುತ್ತಾರೆ.

6. <u>ಪ್ರಕರಣದ ಸಂಕ್ಷಿಪ್ತ ಸಾರಾಂಶ**:**</u> ದೂರನ್ನು ಪರಿಶೀಲಿಸಲಾಗಿ, ಬಿಡದಿ ಹೋಬಳಿ, ಶೇಷಗಿರಿಹಳ್ಳಿ ಗ್ರಾಮದ ಸರ್ವೆ ನಂ.7/4 ರಲ್ಲಿ ಆರ್.ಟಿ.ಸಿ.ಯನ್ನು ನೋಡಿದಾಗ ಭೂಪರಿವರ್ತನೆ ಎಂದು ಸ್ಪಷ್ಟವಾಗಿ ನಮೂದಾಗಿದ್ದು, ಈಗಾಗಲೇ ಸಂಬಂಧಪಟ್ಟ ಪ್ರಾಧಿಕಾರದ ನಕ್ಷೆ ಅನುಮೋದನೆ ಪಡೆದು, ನಿವೇಶನಗಳನ್ನು ರಚಿಸಿದ್ದು, ಈ ಬಗ್ಗೆ

ಪರಿವರ್ತನೆಗೊಂಡ ಜಾಗವನ್ನು ಮರೆಮಾಚಿ ಒಬ್ಬ ವ್ಯಕ್ತಿ ಪರವಾಗಿ ಅಕ್ರಮವಾಗಿ ಕ್ರಯಪತ್ರ ನೋಂದಾಯಿಸಿದ್ದು, ಸದರಿ ಕ್ರಯಪತ್ರದ ವಿವರಗಳನ್ನು ದೂರಿನಲ್ಲಿ ವಿವರವಾಗಿ ನಮೂದಿಸಲಾಗಿರುತ್ತದೆ. ಮೇಲ್ಕಂಡ ಸರ್ವೆ ನಂಬರಿಗಳಿಗೆ ಸಂಬಂಧಪಟ್ಟಂತೆ ಭೂ ಪರಿವರ್ತನೆ ಬಗ್ಗೆ ನಮೂದಿಲ್ಲದೇ ಕಾವೇರಿ ಇಂಟ್ರಿಗರೇಷನ್ ಮೂಲಕ ನೋಂದಣಿ ಮಾಡಲಾಗಿದ್ದು, ಭೂ ತಂತ್ರಾಂಶ ದಾಖಲೆಯನ್ನು ಪರಿಶೀಲಿಸಲಾಗಿ, ಯಾವುದೇ ಮಾಹಿತಿ ತಂತ್ರಾಂಶದಲ್ಲಿ ಕಾಣಿಸಿಕೊಂಡಿರುವುದಿಲ್ಲ. ಭೂ ಪರಿವರ್ತನೆಯ ಬಗ್ಗೆ ಮಾನ್ಯ ತಹಶೀಲ್ದಾರ್, ರಾಮನಗರ, ಉಪವಿಭಾಗೀಯ ಅಧಿಕಾರಿ, ರಾಮನಗರ ಮತ್ತು ಭೂ ದಾಖಲೆಗಳ ನಿರ್ದೇಶಕರು, ರಾಮನಗರ ಇವರಿಗೆ ಪತ್ರ ಬರೆದು ಹಾಗೂ ಮಾನ್ಯ ಆಯುಕ್ತರಿಗೆ ಪತ್ರ ಬರೆದು, ಉಪವಿಭಾಗೀಯ ಅಧಿಕಾರಿಗಳು ಅರ್ಜಿದಾರ ವಸತಿಗೋಸ್ಕರ ದಿನಾಂಕ 20.07.1998 ರಂದು ಭೂಪರಿವರ್ತನೆ ಮಾಡಿಸಿಕೊಂಡಿರುತ್ತಾರೆ ಮತ್ತು ಪ್ರಶ್ನಿತ ಸ್ವತ್ತುಗಳನ್ನು ಮಹಾದೇವಯ್ಯ ಬಿನ್ ಲೇಟ್ ಪುಟ್ಟೇಗೌಡ, ನಿರ್ದೇಶಕರು, ಮೆಗಾ ಸಿಟಿ ಡೆವಲಪರ್ಸ್ ಇವರಿಗೆ ದಿನಾಂಕ 16.08.2001 ರಂದು ನೋಂದಾಯಿತ ಜಿ.ಪಿ.ಎ ಬಗ್ಗೆ ಕ್ರಯ ಕರಾರು ನಕ್ಷೆ ಅನುಮೋದನೆ, ಸದರಿಯವರು ಯೋಜನಾ ಪ್ರಾಧಿಕಾರ ಬೆಂಗಳೂರು ಇವರಿಂದ ವಸತಿ ವಿನ್ಯಾಸ ನಕ್ಷೆ ಪಡೆದುಕೊಂಡು ವಸತಿ ವಿನ್ಯಾಸ ನಕ್ಷೆ ಅನುಮೋದನೆಯ ಆಧಾರದ ಮೇಲೆ ಸಾಮಾನ್ಯ ಅಧಿಕಾರ ಪತ್ರ ಮೇಲೆ ಮಹಾದೇವಯ್ಯ ವಿವಿಧ ಖರೀದಿದಾರರಿಗೆ ಮಾರಾಟ ಮಾಡಿದ್ದು, ಆ ಬಗ್ಗೆ ವಿವರವಾದ ಮಾಹಿತಿಯನ್ನು ದೂರಿನಲ್ಲಿ ನೀಡಲಾಗಿರುತ್ತದೆ. ಸದರಿ ಆರ್.ಟಿ.ಸಿ.ಯಲ್ಲಿ ಭೂ ಪರಿವರ್ತನೆಯಾದ ಬಗ್ಗೆ ಟ್ಯಾಂಪರ್ ಮಾಡಿದ್ದು, ತಂತ್ರಾಂಶದಲ್ಲಿ ಪಹಣಿಯನ್ನು ಅಪ್ಲೋಡ್ ಮಾಡದೇ 19 ಜನರಿಗೆ ಮಾರಾಟ

ಮಾಡಿ ವಂಚಿಸಿರುತ್ತಾರೆ. ಈ ಕಾರಣದಿಂದ ಪಿರ್ಯಾದಿ ಅರ್ಜಿದಾರರ ವಿರುದ್ಧ ಎದುರುದಾರ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ.

7. ಅರ್ಜಿದಾರರ ಮೇಲೆ ಇರುವಂತ ಆಪಾದನೆ ಜಾಮೀನು ರಹಿತವಾದಂತಹ ಆಪಾದನೆ ಆಗಿದ್ದರೂ ಸಹಿತ ಜೀವವಾಧಿ ಶಿಕ್ಷೆ ಮತ್ತು ಮರಣ ದಂಡನೆ ವಿಧಿಸತಕ್ಕಂತಹ ಆಪಾದನೆ ಆಗಿರುವುದಿಲ್ಲ ಮತ್ತು ಮಾನ್ಯ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ಮಾಡುವಂತಹ ಆಪಾದನೆ ಆಗಿರುತ್ತದೆ.

8. ದೂರನ್ನು ಪರಿಶೀಲಿಸಲಾಗಿ, ಘಟನೆ ದಿನಾಂಕ 26.09.2024 ರಂದು ನಡೆದಿದ್ದು, ದೂರನ್ನು ದಿನಾಂಕ 09.02.2026 ರಂದು, ಪ್ರಥಮ ವರ್ತಮಾನ ವರದಿಯನ್ನು ದಿನಾಂಕ 14.02.2026 ರಂದು ಸ್ವೀಕರಿಸಿದ್ದು, ಇಷ್ಟು ದಿವಸ ತಡವಾಗಿದ್ದರ ಬಗ್ಗೆ ಸಮರ್ಪಕವಾದ ಕಾರಣಗಳನ್ನು ನೀಡಿರುವುದಿಲ್ಲ.

9. ದೂರನ್ನು ಪರಿಶೀಲಿಸಲಾಗಿ, ಸರ್ವೆ ನಂ.5/10 ಮತ್ತು 5/12 ಅರ್ಜಿದಾರ ಶಿವಣ್ಣ ಬಿನ್ ಕರಿಯಪ್ಪ ಎನ್ನುವವರಿಗೆ ಸದರಿ ಜಮೀನು ಎಡಿಎಲ್‌ಆರ್ 25/97-99 ರಂತೆ ಬಿಡದಿ ಭೂಪರಿವರ್ತನೆಯಾಗಿದ್ದು ಎಂಬುದನ್ನು ಅಳಿಸಿ ಕೃಷಿ ಜಮೀನು ಅಂತಾ ಹೇಳಿ ನೋಂದಣಿ ಕ್ರಯಪತ್ರ ಮಾಡಿಕೊಟ್ಟು ನೋಂದಣಿ ಕಾನೂನು ಕಲಂ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆ ಅಂತಾ ದೂರು ಕೊಟ್ಟಿದ್ದನ್ನು ಪರಿಶೀಲಿಸಲಾಗಿ, ದಿನಾಂಕ 20.07.1998 ರಂದು ಉಪ ವಿಭಾಗಾಧಿಕಾರಿಯವರು ಸದರಿ ಜಮೀನು ವ್ಯವಸಾಯೇತ್ತರ ಜಮೀನಾಗಿ ಆದೇಶ ಮಾಡಿದ್ದು, ಸದರಿ ಆದೇಶದ ಷರತ್ತು ನಂ.10 ರಲ್ಲಿ ಭೂ

ಪರಿವರ್ತಿಸಲಾದ ಜಮೀನು 2 ವರ್ಷದ ಅವಧಿಯೊಳಗೆ ಸದುದ್ದೇಶಕ್ಕೆ ಉಪಯೋಗಿಸದಿದ್ದಲ್ಲಿ ಭೂ ಪರಿವರ್ತನೆ ವಜಾಕರಿಸಿದೆ ಎಂದು ಭಾವಿಸತಕ್ಕದ್ದು ಅಂತಾ ಷರತ್ತು ಇರುತ್ತದೆ. ಈ ಷರತ್ತಿನ ಪ್ರಕಾರ 2 ವರ್ಷದೊಳಗೆ ಷರತ್ತನ್ನು ಪಾಲಿಸಿರುವುದಿಲ್ಲ. ಅರ್ಜಿದಾರ 2004-05 ರಿಂದ ಸದರಿ ಸರ್ವೆ ನಂಬರಿಗೆ ಸಂಬಂಧಪಟ್ಟಂತೆ 2025-26 ಪಹಣಿ ಪತ್ರಿಕೆ ಹಾಜರುಪಡಿಸಿದ್ದು, ಸದರಿ ಪಹಣಿಪತ್ರಿಕೆಯಲ್ಲಿ ರಾಗಿ ಬೆಳೆ, ಹುರುಳಿ ಬೆಳೆ ಬೆಳೆಯತ್ತಿದ್ದರ ಬಗ್ಗೆ ಹಾಗೂ ಕೃಷಿ ಜಮೀನು ಇದ್ದ ಬಗ್ಗೆ ನಮೂದಿಸಲಾಗಿರುತ್ತದೆ. ಅದೇ ಪ್ರಕಾರ ದಿನಾಂಕ 04.02.2026 ರಂದು ರಾಜಸ್ವ ನಿರೀಕ್ಷಕರು, ಬಿಡದಿ, ಗ್ರಾಮಾಡಳಿತ ಅಧಿಕಾರಿ ಕಂಚುಗಾರಹಳ್ಳಿ ವೃತ್ತ ಇವರು ಸದರಿ ಸರ್ವೆ ನಂಬರಿಗೆ ಸಂಬಂಧಪಟ್ಟಂತೆ ಜಂಟಿ ವರದಿ ಕೊಟ್ಟಿದ್ದು, ಸದರಿ ವರದಿಯಲ್ಲಿ ಭೂ ಪರಿವರ್ತನೆಯಾದ ಜಮೀನುಗಳಲ್ಲಿ ತೊಗರಿ, ರಾಗಿ, ಕಾಡು ತುಳಸಿ, ಹುರುಳಿ ಬೆಳೆ ಇರುತ್ತದೆ. ಬಡಾವಣೆಗೆ ಸಂಬಂಧಪಟ್ಟಂತೆ ಯಾವುದೇ ಬೆಳವಣಿಗೆಗಳು ಕಂಡು ಬಂದಿರುವುದಿಲ್ಲ ಅಂತಾ ತಿಳಿಸಿರುತ್ತಾರೆ. ಆದ್ದರಿಂದ ಸದರಿ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಸದರಿ ಪ್ರಕರಣ ಸಂಪೂರ್ಣ ಸಿವಿಲ್ ಪ್ರಕರಣ ಆಗಿರುತ್ತದೆ. ಇಂಥ ಸಂದರ್ಭದಲ್ಲಿ ಅರ್ಜಿದಾರರು ಷರತ್ತಿನ ಆಧಾರದ ಮೇಲೆ ನಿರೀಕ್ಷಣಾ ಜಾಮೀನು ಪಡೆಯಲು ಅರ್ಹರಿರುತ್ತಾರೆ.

10. ಅರ್ಜಿದಾರರು ಬೆಂಗಳೂರು ದಕ್ಷಿಣ ಜಿಲ್ಲಾ ರಹವಾಸಿಯಾಗಿದ್ದು ಚರ ಮತ್ತು ಸ್ಥಿರ ಆಸ್ತಿಗಳನ್ನು ಹೊಂದಿದ್ದು ತಲೆ ಮರೆಸಿಕೊಳ್ಳುವ ಸಾಧ್ಯತೆ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಮಾನ್ಯ ನ್ಯಾಯಾಲಯವು ಅರ್ಜಿದಾರರಿಗೆ ಷರತ್ತಿನ ಆಧಾರದ ಮೇಲೆ ನಿರೀಕ್ಷಣಾ ಜಾಮೀನನ್ನು ಮಂಜೂರು ಮಾಡುವುದು ಸೂಕ್ತ ಅಂತಾ ನ್ಯಾಯಾಲಯಕ್ಕೆ

ಕಂಡುಬಂದಿರುವುದರಿಂದ ಸದರಿ ಅಂಶ ಸಂಖ್ಯೆ ***1*** ನ್ನು ಸಕಾರಾತ್ಮಕವಾಗಿ ಉತ್ತರಿಸಲಾಯಿತು.

11. <u>ಅಂಶ ಸಂಖ್ಯೆ **2**:</u> ಅಂಶ ಸಂಖ್ಯೆ 1 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಃ

## <u>ಆದೇಶ</u>

ಅರ್ಜಿದಾರರ ಪರ ವಕೀಲರು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ಅಡಿಯಲ್ಲಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಒಂದು ವೇಳೆ ಎದುರುದಾರ ಪೊಲೀಸರು ಅರ್ಜಿದಾರರನ್ನು ದಸ್ತಗಿರಿ ಮಾಡಿದ್ದಲ್ಲಿ ಸದರಿ ಅರ್ಜಿದಾರರಿಂದ ತಲಾ ರೂ.50,000/- (ಐವತ್ತು ಸಾವಿರ ರೂಪಾಯಿ) ಸ್ವ ಮುಚ್ಚಳಿಕೆ ಪತ್ರ ಹಾಗೂ ಅಷ್ಟೇ ಮೊತ್ತದ ಒಬ್ಬ ಸೂಕ್ತ ಜಾಮೀನುದಾರರನ್ನು ಪಡೆದುಕೊಂಡು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಆದೇಶಿಸಲಾಗಿದೆ ಹಾಗೂ ಅರ್ಜಿದಾರ ಈ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು.

### <u>ಷರತ್ತುಗಳು</u>

1. ಅರ್ಜಿದಾರರು ತಮ್ಮ ವಿಳಾಸಕ್ಕೆ ಸಂಬಂಧಪಟ್ಟಂತೆ ಚುನಾವಣಾ ಗುರುತಿನ ಚೀಟಿ/ಆಧಾರ್ ಕಾರ್ಡ್ ಹಾಗೂ ಇತರೆ ದಾಖಲೆಯನ್ನು ಹಾಜರುಪಡಿಸತಕ್ಕದ್ದು.
2. ಅರ್ಜಿದಾರರು ಅಭಿಯೋಜಕ ಪಕ್ಷದ ಸಾಕ್ಷಿಗಳನ್ನು ಯಾವುದೇ ರೀತಿಯಿಂದಲೂ ಹೆದರಿಸತಕ್ಕದ್ದಲ್ಲ ಹಾಗೂ ತನಿಖಾಧಿಕಾರಿಯವರಿಗೆ ತನಿಖೆಗೆ ಸಹಕರಿಸತಕ್ಕದ್ದು.
3. ನ್ಯಾಯಾಲಯಕ್ಕೆ ತಪ್ಪದೇ ಎಲ್ಲಾ ವಿಚಾರಣೆ ದಿನಾಂಕ ದಂದು ಹಾಜರಿರತಕ್ಕದ್ದು.
4. ಅರ್ಜಿದಾರರು ಪುನಃ ಇಂತಹ ಪ್ರಕರಣಗಳಲ್ಲಿ ಭಾಗಿಯಾಗತಕ್ಕದ್ದಲ್ಲ.

5. ಅರ್ಜಿದಾರರು ಎದುರುದಾರ ಪೊಲೀಸ್ ಠಾಣೆಯಲ್ಲಿ ಪ್ರತಿ ಸೋಮವಾರ ಮಧ್ಯಾಹ್ನ 2 ರಿಂದ 5 ಗಂಟೆಯೊಳಗೆ ಎರಡು ತಿಂಗಳು ಹಾಜರಾತಿ ನೀಡತಕ್ಕದ್ದು.

6. ಆದೇಶ ಆದ 15 ದಿವಸದೊಳಗೆ ಅರ್ಜಿದಾರರು ಸಂಬಂಧಪಟ್ಟ ದಂಡಾಧಿಕಾರಿ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆಯಲು ಆದೇಶಿಸಲಾಗಿದೆ.

ಈ ಮೇಲ್ಕಂಡ ಷರತ್ತುಗಳನ್ನು ಉಲ್ಲಂಘನೆ ಮಾಡಿದಲ್ಲಿ ತಕ್ಷಣವೇ ಜಾಮೀನು ಅರ್ಜಿ ವಜಾ ಆಗತಕ್ಕದ್ದು ಅಂತಾ ಆದೇಶ ಮಾಡಲಾಗಿದೆ.

*(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ ಗ್ರೇಡ್ III ರವರಿಗೆ ನೇರವಾಗಿ ಗಣಕಯಂತ್ರ ಪರದೆಯ ಮೇಲೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ **26** ನೇ ಮಾರ್ಚ್ ಮಾಹೆ **2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

(ಎಂ.ಹೆಚ್.ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.

**** ****